**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 3810/2022**

ಪಿ.ಡಬ್ಲ್ಯೂ-02

**ಸಾಕ್ಷಿಗೆ ದಿಃ 12.06.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರಃ B.K.V. ವಕೀಲರಿಂದಃ

ಕೆ.ಜಿ. ದೇವಪಟ್ಟಣ ನನಗೆ ಗೊತ್ತು. ಜಾಗೀರದಾರರು ಯಾರು ಮತ್ತು ಅವರ ಹೆಸರು ಏನು ಎಂದು ಗೊತ್ತಾ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಸದರಿ ದೇವಪಟ್ಟಣ ಜಮೀನು ರದ್ದಿಯಾತಿಯಾಗಿ ಸರಕಾರಕ್ಕೆ ಹೋದ ಬಗ್ಗೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ನಮ್ಮದೇ ಜಮೀನು ಪಶ್ಚಿಮಕ್ಕೆ ಜಯಮ್ಮಾ, ಶಂಕರಯ್ಯ ಮತ್ತು ನಾಗರಾಜ ಅವರ ಜಮೀನು ಇರುತ್ತದೆ. ಅದರ ಸರ್ವೆ ನಂ 42 ನನಗೆ ಗೊತ್ತಿಲ್ಲ. ಉತ್ತ್ರರಕ್ಕೆ ಮರಿಗೌಡನ ಮಗ ಬೋರಯ್ಯ ಅವರ ಜಮೀನು ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಜಯಮ್ಮಾ ಅವರ ಜಮೀನು ಇರುತ್ತದೆ.

ಈ ಮೇಲೆ ಹೇಳಿದ ಚಕ್ಕುಬಂದಿಯ ಜಾಗವನ್ನು ನಾನು ನಕಾಶೆಯಲ್ಲಿ ನೋಡಿರುತ್ತೇನೆ. ಈ ಚಕ್ಕಬಂದಿಯ ಮದ್ಯ 1 ದಾರಿ ಹೋಗುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಯಾವುದೇ ಫಲಾಟೆ ಆಗಿಲ್ಲ ಅದು ಜಾಗೀರದಾರರ ಹಟ್ಟಿವಾಡಿ ಅವರ ಜಾಗವೆಂದರೆ ಸರಿಯಲ್ಲ. ಸದರಿ ಜಾಗ ಈಗಲೂ ಸಹ ಜಾಗೀರದಾರರ ವಶದಲ್ಲಿದೆ ಎಂದರೆ ಸರಿಯಲ್ಲ. ನಾವೆಲ್ಲರೂ ಕಾಂಗ್ರಸ್ ಪಕ್ಷದವರು ಎಂದರೆ ಸರಿ. ಕೃಷ್ಣೆಗೌಡವರು ಕಾಂಗ್ರೆಸ್ ಪಕ್ಷದವರು ಆಗಿದ್ದು ನಮ್ಮ ಊರಿನ ಪಂಚಯಿತಿ ಸದಸ್ಯರು ಎಂದರೆ ಸರಿ. ಕೃಷ್ಣೆಗೌಡ ಮತ್ತು ಎಂ.ಎಲ್.ಎ ರಂಗನಾಥ ಅವರು ಸಂಬಂಧ ಚನ್ನಾಗಿದೆ ಎಂದರೆ ಸರಿ. ಸದರಿ ಜಾಗವನ್ನು ಆಕ್ರಮಿಸಬೇಕೆಂಬ ಉದ್ದೇಶದಿಂದ ನಾನು ಕೃಷ್ಣೆಗೌಡ ಮತ್ತು ಎಂ.ಎಲ್.ಎ ಗಳು ಪೊಲಿಸರ ಜೊತೆ ಸೇರಿಕೊಂಡು

ಸುಳ್ಳು ಕೇಸನ್ನು ಆರೋಪಿತರ ವಿರುದ್ದ ದಾಖಲು ಮಾಡಿರುತ್ತೇವೆ ಎಂರದೆ ಸರಿಯಲ್ಲ.

ಮೇಲೆ ಹೇಳಿದ ಚಕ್ಕುಬಂದಿ ಜಾಗದಲ್ಲಿ ತೊಟ್ಟಿ ಮತ್ತು ಮನೆ ಇರಲಿಲ್ಲಿವೆಂದರೆ ಸರಿಯಲ್ಲ. ಗಲಾಟೆ ಆದ ಸಮಯದಲ್ಲಿ ನಾನು ಟ್ರಾಕ್ಟರ್ ನಲ್ಲಿ ಸಿಮೆಂಟ್ ಇಟ್ಟಿಗೆ ತರುತ್ತಿದ್ದೆ. ಸಿಮೆಂಟ್ ಇಟ್ಟಿಗೆಯನ್ನು ಹೊಸ ಮನೆ ಕಟ್ಟಲು ತರುತ್ತಿದ್ದೆ. ಮನೆ ಕಟ್ಟಲು ಲೈಸನ್ಸ್ ಪಡೆದಿರುವುದಿಲ್ಲ. ಹಳೆ ಮನೆ ಇತ್ತು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಸಾಕ್ಷಿ ಮುಂದುವರೆದು ದಾಖಲಾತಿ ಕೊಡುತ್ತೇನೆ ಎಂದು ಹೇಳುತ್ತಾರೆ.

ಆರೋಪಿತರು ನನಗೆ ಯಾವುದೇ ಗಾಯ ಮಾಡಿಲ್ಲ ಹಲ್ಲೆ ಮಾಡಿಲ್ಲ ಅಧ್ಯಕ್ಷರ ಚಿತ್ತಾವಣೆ ಮೇರೆಗೆ ಆರೋಪಿತರ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೈ ಕಾಲು ಮುರಿದಿರಲಿಲ್ಲ. ದಿಃ 29.03.2022 ರಂದು 12 ಗಂಟೆಗೆ ಆರೋಪಿ 1 – 4 ಅವರು 10-12 ಜನರ ಗುಂಪಿನೊಂದಿಗೆ ಬಂದು ಜೆ.ಸಿ.ಬಿ.ಯಿಂದ ಮನೆ ಊರಳಿಸಿರುತ್ತಾರೆ ಎಂದರೆ ಸರಿಯಲ್ಲ. 6ನೇ ಆರೋಪಿ ಉಳಿದ ಆರೋಪಿತರಿಗೆ ಪ್ರಚೋದನೆ ನೀಡಿರುವುದಿಲ್ಲವಂದರೆ ಸರಿಯಲ್ಲ.

ಜಾಗೀರದಾರ ಅವರ ಜಮೀನನ್ನು ವೆಂಕಟನಾರಾಯಣ ಅವರ ಕಾಲದಿಂದ ಆರೋಪಿತರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಅವರನ್ನು ಜಾಗದಿಂದ ಹೊರಗೆ ಓಡಿಸಲು ಈ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಜಮೀನು ಸರ್ವೆ ನಂ 42 ಕ್ಕೆ ಆರೋಪಿತರು ಅತಿಕ್ರಮ ಪ್ರವೇಶ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದು ಜೆ.ಸಿ.ಬಿ. ಸಂಖ್ಯೆ ಕೆಎ 06 ಜಡ್ 6330 ಆಗಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿ 1-4 ಚಾ.ಸಾ. 4 ಅವರ ಜುಟ್ಟನ್ನು ಹಿಡಿದು ಎಳೆದಾಡಿ ಸಸೀರೆ ಎಳೆದಾಡಿರುತ್ತಾರೆ ಎಂದರೆ ಸರಿಯಲ್ಲ. ಚಾ.ಸಾ. 1 ಅವರ ಎಡಗಾಲಿನ ಗಿಣ್ಣೆಗೆ ಆರೋಪಿ 3 ಅವರು ಹೊಡೆದಿರುತ್ತಾರೆ ಎಂದರೆ ಸರಿಯಿಲ್ಲ. ಆರೋಪಿ 3 ಸಹ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಬೋರಮ್ಮಾ ಅವರಿಗೂ ಅವಾಚ್ಯ ಶಬ್ದಗಳಿಂದ ಬೈದು ಕಿವಿಗೆ ಹೊಡೆದಿಲ್ಲವೆಂದರೆ ಸರಿಯಲ್ಲ.

ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ನಾನು ಸುಳ್ಳು ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ತರಹದ ಗಾಯವಾಗಿರಲಿಲ್ಲವೆಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೆವೆ ಎಂದರೆ ಸರಿಯಲ್ಲ. ಪೊಲಿಸರು ಮಹಜರ್ ಬರೆದಾಗ ನಾನು ಇದ್ದೆ. ಮಹಜರ್ ನಲ್ಲಿ ಬರೆದ ಚಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ.

ಮಹಜರ್ ಬರೆದಾಗ ನಾನು ಇರಲಿಲ್ಲ ಅದನ್ನು ಎಂ.ಎಲ್.ಎ ಮಾತು ಕೇಳಿ ಠಾಣೆಯಲ್ಲಿ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಜಾಗೀರದಾರರು ಹಟ್ಟಿವಾಡಿಯಲ್ಲಿ ಮುಚ್ಚಿದ ರಸ್ತೆಯನ್ನು ಸಿ.ಪಿ.ಐ ಅವರು ತಗೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**